ಎಮ್.ವಿ.ಸಿ. ನಂ.201/2025

PW-1

ದಿನಾಂಕಃ 12-08-2026.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀಮತಿ BMR ಮಾನ್ಯ ವಕೀಲರಿಂದ ಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ದೂರಿನ ದೃಡೀಕೃತ ನಕಲನ್ನು ನಿಪಿ.1, ಪ್ರಥಮ ವರ್ತಮಾನ ವರದಿಯ ದೃಡೀಕೃತ ನಕಲನ್ನು ನಿಪಿ.2, ಅಂತಿಮ ವರದಿಯ ದೃಡೀಕೃತ ನಕಲನ್ನು ನಿಪಿ.3, ಆಪರಾಧ ವಿವರ ನಮೂನೆಯ ದೃಡೀಕೃತ ನಕಲನ್ನು ನಿಪಿ.4, ಸಾಕ್ಷಿಯ ಗಾಯದ ಪ್ರಮಾಣ ಪತ್ರವನ್ನು ನಿಪಿ.5, IMV ವರದಿಯ ದೃಡೀಕೃತ ನಕಲನ್ನು ನಿಪಿ.6, discharge summary ನ್ನು ನಿಪಿ.7, ಕ್ರಮ ಸಂಖ್ಯೆ 1 ರಿಂದ 19 ರವರೆಗಿನ ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿಪಿ.8, 10 ಮೆಡಿಕಲ್ ಚೀಟಿಗಳನ್ನು ಒಟ್ಟಾಗಿ ನಿಪಿ.9 ಎಂದು ಗುರುತಿಸಲಾದವು. ನನ್ನ ಅರ್ಜಿಯನ್ನು ನಾನು ಕೇಳಿರುವಂತೆ ಪುಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ಎದುರುದಾರರ ಪರ ಶ್ರೀ RND ಮಾನ್ಯ ವಕೀಲರಿಂದಃ**

3. ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಯಾವ ದಿನಾಕಂದಂದು ಹುಟ್ಟಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ಅಪಘಾತವಾದ ದಿನಾಂಕದಂದು ನನಗೆ ವಯಸ್ಸು 32 ವರ್ಷ ಇರುತ್ತದೆ ಎಂದು ತೋರಿಸಲು ನಾನು ನನ್ನ ಶಾಲಾ ದಾಖಲಾತಿಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ಸದರಿ ದಾಖಲೆಗಳು ನಾನು ಓದಿರುವ ಶಾಲೆಯಲ್ಲಿ ದೊರೆಯುತ್ತವೆ. ನನ್ನ ಸದರಿ ಶಾಲಾ ದಾಖಲಾತಿಗಳಲ್ಲಿ ನನ್ನ ವಯಸ್ಸು ಅಪಘಾತವಾದ ದಿನಾಂಕಕ್ಕಾಂದತೆ 35-36

ತೋರಿಸುತ್ತಿದ್ದರೂ ಕೂಡಾ ನಾನು ನನ್ನ ಅರ್ಜಿಯಲ್ಲಿ 32 ಎಂದು ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಗಾಯದ ಪ್ರಮಣ ಪತ್ರದಲ್ಲಿ ಹಾಗೂ ಆಧಾರ ಕಾರ್ಡಿನಲ್ಲಿ ನನ್ನ ವಯಸ್ಸು 32 ಎಂದು ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಪಘಾತವಾದ ಮುಂಚಿತವಾಗಿ ಕೂಲಿ ಕೆಲಸವನ್ನು ಮಾಡಿಕೊಂಡು ತಿಂಗಳಿಗೆ ರೂ.30,000/- ಆದಾಯವನ್ನು ಹೊಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ಅಪಘಾತವಾದ ದಿನದಂದು ಸದರಿ tractor ನಲ್ಲಿ ನಾವು ಒಟ್ಟು 18 ಜನ ಪ್ರಯಾಣಿಸುತ್ತಿದ್ದೇವು. ಸದರಿ ವಾಹನದಲ್ಲಿ ನಮ್ಮ ಹೊಲಗಳಿಗೆ ಹೋಗುತ್ತಿದ್ದೇವು. ಸದರಿ 18 ಜನರು ನನ್ನ ಮನೆಯವರಾಗಿರುತ್ತಾರೆ. ನಾವುಗಳು ಸದರಿ ದಿನದಂದು ಸದರಿ ವಾಹನದಲ್ಲಿ ಅನಧಿಕೃತವಾಗಿ ಪ್ರಯಾಣಿಸುತ್ತಿದ್ದರಿಂದ ಯಾವುದೇ ಪರಿಹಾರದ ಹಣವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಸದರಿ ಬಸ್ಸು ನಮ್ಮ tractor ಎದುರಿನಿಂದ ಬಂದಿರುತ್ತದೆ. ಸುಮಾರು ಅರ್ಧ ಕಿ.ಮೀ ಒಳಗೆ ಅಂತರದಿಂದ ಸದರಿ ಬಸ್ಸು ಬರುತ್ತಿರುವುದನ್ನು ನೋಡಿರುತ್ತೇನೆ. ಸದರಿ ಬಸ್ಸು ರಸ್ತೆ ಮೇಲೆ ಹೋಗುತ್ತಿತ್ತು. ಸದರಿ ರಸ್ತೆ ಅಗಲ 40 ಪೀಟ್ ಅಗಲ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ 12 ಪೀಟ್ ಅಗಲ ಇರುತ್ತದೆ. ಸದರಿ ರಸ್ತೆ ಚಿಕ್ಕದ್ದಾಗಿದ್ದರಿಂದ ಹಾಗೂ ಅಲ್ಲಿ ತಗ್ಗು ದಿಣ್ಣೆಗಳು ಇದ್ದುದ್ದರಿಂದ ಅಲ್ಲಿ ವಾಹನಗಳು ನಿಧನಾವಾಗಿ ಓಡಾಡುತ್ತವೆ ಎಂದರೆ ಸರಿ. ಸದರಿ ದಿನದಂದು ಸದರಿ ವಾಹನವನ್ನು ಸದರಿ ಶ್ರೀ ಜ್ಞಾನಪ್ಪ ಇವರು ಚಲಾಯಿಸುತ್ತಿದ್ದರು. ಸದರಿ ಜ್ಞಾನಪ್ಪ ಇವರ ಹತ್ತಿರ ಸದರಿ ವಾಹನವನ್ನು ಓಡಿಸಲು DL ಇದ್ದು ಅದನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ tractor ಗೆ ವಿಮೆ ಇದ್ದು ಅದರ ದಾಖಲೆಯನ್ನು ಪ್ರಸ್ತುತ ಪ್ರಕರಣದಲ್ಲಿ

ಹಾಜರುಪಡಿಸಿರುತ್ತೇನೆ. ಸದರಿ ವಾಹನಕ್ಕೆ ವಿಮೆಯನ್ನು ಒಕ್ಕಲುತನಕ್ಕಾಗಿ ಪಡೆದುಕೊಳ್ಳಲಾಗಿರುತ್ತದೆ. ಸದರಿ DL ಹಾಗೂ ವಿಮೆಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಸದರಿ ದಿನದಂದು ನಮ್ಮ ಸದರಿ tractor ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದು ಅದರ ಒಂದು ಗಾಲಿ ಕಚ್ಚಾ ರಸ್ತೆ ಹಾಗೂ ಇನ್ನೊಂದು ಗಾಲಿ ಟಾರ ರಸ್ತೆ ಮೇಲಿತ್ತು. ಸದರಿ ದಿನದಂದು ನಿಮ್ಮ ಸದರಿ ವಾಹನದ ಚಾಲಕ ಸದರಿ ಬಸ್ಸು ಬರುತ್ತಿರುವುದನ್ನು ನೋಡಿ ಅದನ್ನು ಕಚ್ಚಾ ರಸ್ತೆ ಮೇಲೆ ತೆಗೆದುಕೊಳ್ಳಲು ಪ್ರಯತ್ನಪಟ್ಟಿರುತ್ತಾರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಸದರಿ ಬಸ್ಸು ಜೋರಾಗಿ ತಮ್ಮ ಕಡೆಗೆ ಬಂದು ತಮ್ಮ tractor ಗೆ ಡಿಕ್ಕಿಪಡಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಅಪಘಾತವು ಸದರಿ tractor ಚಾಲಕನ ತಪ್ಪಿನಿಂದ ಆಗಿರುತ್ತದೆ ಹಾಗೂ ಸದರಿ ದಿನದಂದು ಅವರು DL ನ್ನು ಹೊಂದಿರಲಿಲ್ಲಿ ಹಾಗೂ ಸದರಿ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾವುಗಳು ಪೊಲೀಸರೊಂದಿಗೆ ಶಾಮಿಲಾಗಿ ಸದರಿ ಬಸ್ಸನ್ನು ಸುಳ್ಳಾಗಿ ಅಳವಸಿಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಸದರಿ ಬಸ್ಸಿನ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪರಿಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಎದುರುದಾರರು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.